ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/03/2016-17. ದಿನಾಂಕ:27-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಎನ್. ಮೂಗಬಸಪ್ಪ ತಂದೆ ಲೇಟ್ ನಿಂಬಳಗೇರಿ ಬಸಪ್ಪ<br>2)ಓಬಕ್ಕ ಉರುಫ್ ಸಣ್ಣಕ್ಕ ಗಂಡ ಲೇಟ್ ನಿಂಬಳಗೇರಿ ಬಸಪ್ಪ.<br>ಪಾಲಯ್ಯನಕೋಟೆ ಗ್ರಾಮ<br>ಕೂಡ್ಲಿಗಿ ತಾಲೂಕು | ನಿಂಬಳಗೇರಿ ಬಸಪ್ಪ ತಂದೆ ಲೇಟ್ ಬಸಪ್ಪ<br>ಪಾಲಯ್ಯನಕೋಟೆ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಪಾಲಯ್ಯನಕೋಟೆ ಗ್ರಾಮದ ಸನಂ 102ಬಿ/1ಸಿ. ವಿಸ್ತೀರ್ಣ 3-50. ಎಕ್ರೆ ಜಮೀನನ್ನು ದಾನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಪಾಲಯ್ಯನಕೋಟೆ ಗ್ರಾಮದ ಸನಂ 102ಬಿ/1ಸಿ. ವಿಸ್ತೀರ್ಣ 3-50. ಎಕ್ರೆ ಜಮೀನನ್ನು ಸದರಿ ಗ್ರಾಮದ ಓಬಕ್ಕ ಉರುಫ್ ಸಣ್ಣಕ್ಕ ಗಂಡ ಲೇಟ್ ನಿಂಬಳಗೇರಿ ಬಸಪ್ಪ ಇವರು ಸದರಿ ಗ್ರಾಮದ ಎನ್.ಮೂಗಬಸಪ್ಪ ತಂದೆ ಲೇಟ್ ನಿಂಬಳಗೇರಿ ಬಸಪ್ಪ ಇವರ ಹೆಸರಲ್ಲಿ ದಿನಾಂಕ 25-02-2016 ರ ಡಾಕ್ಯುಮೆಂಟ್ ನಂಬರ್:3930/2015-16 ರ ಪ್ರಕಾರ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಪಾಲಯ್ಯನಕೋಟೆ ಇವರು ನಮೂನೆ-21 ನೋಟಿಸನ್ನು ದಿನಾಂಕ 27-02-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ನಿಂಬಳಗೇರಿ ಬಸಪ್ಪ ತಂದೆ ಲೇಟ್ ಬಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 11/2015-16. ದಿನಾಂಕ 27-03-2016 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 16-05-2016. ರಿಂದ 27-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ.. ಅರ್ಜಿದಾರರ ಪರ ನ್ಯಾಯಾವಾದಿಗಳು ಪಾಲಯ್ಯನಕೋಟೆ ಗ್ರಾಮದ ಸನಂ 102ಬಿ/1ಸಿ. ವಿಸ್ತೀರ್ಣ 3-50. ಎಕ್ರೆ ಜಮೀನನ್ನು ಅರ್ಜಿದಾರರ ತಾಯಿಯವರಾದ ಓಬಕ್ಕ ಉರುಫ್ ಸಣ್ಣಕ್ಕ ಗಂಡ ಲೇಟ್ ನಿಂಬಳಗೇರಿ ಬಸಪ್ಪ ಇವರು ತನ್ನ ಸ್ವ ಇಚ್ಚೇಯಿಂದ ಹಾಗೂ ಅರ್ಜಿದಾರರ ಮೇಲಿನ ಪ್ರೀತಿ ವಿಶ್ವಾಸದಿಂದ ಹಾಗೂ ನಂಬಿಕೆಯಿಂದ ಈಗ ಹಾಲಿ ತನ್ನ ಹಕ್ಕು ಅದೀನ ಅನುಬೋಗದಲ್ಲಿರುವ ಜಮೀನನ್ನು ಉಚಿತಾರ್ಥಕವಾಗಿ ದಿನಾಂಕ 25-02-2016 ರ ಡಾಕ್ಯುಮೆಂಟ್ ನಂಬರ್: 3930/2015-16. ರ ಪ್ರಕಾರ ಅರ್ಜಿದಾರರಾದ ಎನ್.ಮೂಗಬಸಪ್ಪ ತಂದೆ ಲೇಟ್ ನಿಂಬಳಗೇರಿ ಬಸಪ್ಪ. ಇವರ ಹೆಸರಲ್ಲಿ

ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಕಾರಣ ಸದರಿ ನೊಂದಾಯಿತ ದಾನ ಪತ್ರದನ್ವಯ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ನಮ್ಮ ಪಿತ್ರಾರ್ಜಿತ ಜಮೀನು ಆಗಿದ್ದು ಸದರಿ ಜಮೀನಿನಲ್ಲಿ ನಮಗೆ ಹಕ್ಕು ಇರುತ್ತದೆ. ಕಾರಣ ಸದರಿ ದಾನ ಪತ್ರ ಪ್ರಕಾರ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಬೇಕೇಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರು ಹೇಳಿಕೆಗಳನ್ನು ಕೇಳಿ ನೊಂದಾಯಿತ ದಾನ ಪತ್ರವನ್ನು ಇಂಡಿಕರಣಗೊಳಿಸದೇ ರದ್ದುಪಡಿಸುವುದಾಗಲಿ ಇನ್ನಾವುದೇ ಕ್ರಮವಹಿಸುವುದಾಗಲಿ ಕಂದಾಯ ನ್ಯಾಯಾಲಯದ ವ್ಯಾಪ್ತಿ ಒಳಪಡಿಸುವುದಿಲ್ಲವಾದ್ದರಿಂದ ತಕರಾರು ಅರ್ಜಿಯನ್ನು ತಳ್ಳಿಹಾಕಿ ನೊಂದಾಯಿತ ದಾನ ಪತ್ರದನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಪಾಲಯ್ಯನಕೋಟೆ ಗ್ರಾಮದ ಸನಂ 102ಬಿ/1ಸಿ. ವಿಸ್ತೀರ್ಣ 3–50. ಎಕ್ರೆ ಜಮೀನನ್ನು ದಿನಾಂಕ 25–02–2016 ರ ಡಾಕ್ಯುಮೆಂಟ್ ನಂಬರ್: 3930/2015–16. ರ ದಾನ ಪತ್ರ ಪ್ರಕಾರ ಅರ್ಜಿದಾರರಾದ ಎನ್.ಮೂಗಬಸಪ್ಪ ತಂದೆ ಲೇಟ್ ನಿಂಬಳಗೇರಿ ಬಸಪ್ಪ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 27–06–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡ ಕಛೇರಿ ...ಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎನ್.ಮೂಗಬಸಪ್ಪ ತಂದೆ ಲೇಟ್ ನಿಂಬಳಗೇರಿ ಬಸಪ್ಪ. ಓಬಕ್ಕ ಉರುಫ್ ಸಣ್ಣಕ್ಕ ಗಂಡ ಲೇಟ್ ನಿಂಬಳಗೇರಿ ಬಸಪ್ಪ ಪಾಲಯ್ಯನಕೋಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಆರ್.ರಮೇಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ನಿಂಬಳಗೇರಿ ಬಸಪ್ಪ ತಂದೆ ಲೇಟ್ ಬಸಪ್ಪ ಪಾಲಯ್ಯನಕೋಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.